ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1074
ವಿಧಾನ ಪರಿಷತ್ತು ಸದಸ್ಯರ ಹೆಸರು : ಶ್ರೀ ಆರ್.ಬಿ.ತಿಮ್ಮಾಪೂರ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 29.09.2020
ಉತ್ತರಿಸುವ ಸಚಿವರು : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ಪಡಿತರವನ್ನು ವಿತರಿಸಲು ಸರ್ಕಾರವು ಹೊರ ರಾಜ್ಯಗಳಿಂದ ಖರೀದಿಸುವ ದವಸ-ಧಾನ್ಯಗಳಾವುವು; (ಮಾಹಿತಿ ನೀಡುವುದು)	ಪಡಿತರ ವಿತರಣೆಗೆ ಸಂಬಂಧಿಸಿದಂತೆ ಸರ್ಕಾರವು ಹೊರರಾಜ್ಯಗಳಿಂದ ದವಸಧಾನ್ಯಗಳನ್ನು ಖರೀದಿಸುತ್ತಿಲ್ಲ.
ಆ	ಹೊರ ರಾಜ್ಯಗಳು ಕರ್ನಾಟಕಕ್ಕೆ ಯಾವ ದರದಲ್ಲಿ ದವಸ-ಧಾನ್ಯಗಳನ್ನು ವಿತರಿಸುತ್ತಿವೆ;	ಉದ್ಭವಿಸುವುದಿಲ್ಲ.
ಇ	ರಾಜ್ಯವು ಕೆ.ಜಿ.ಗೆ ಎಷ್ಟು ದರದಂತೆ ದವಸ-ಧಾನ್ಯಗಳಾದ ಅಕ್ಕಿ, ಗೋದಿ, ಜೋಳ, ಬೇಳೆ ಮತ್ತು ಇತರೆ ಧಾನ್ಯಗಳನ್ನು ಖರೀದಿಸುತ್ತದೆ;	ರಾಜ್ಯದಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ವಿತರಿಸಲಾಗುವ ಅಕ್ಕಿ, ಗೋಧಿ, ರಾಗಿ, ಜೋಳ ಮತ್ತು ಕಡಲೆಕಾಳನ್ನು ಈ ಕೆಳಕಂಡ ದರದಲ್ಲಿ ಖರೀದಿಸಲಾಗುತ್ತಿದೆ. 1. ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ ಅಡಿ (ಎನ್.ಎಫ್.ಎಸ್.ಎ.) ವಿತರಿಸಲಾಗುವ ಅಕ್ಕಿಯನ್ನು ಕೇಂದ್ರ ಸರ್ಕಾರದಿಂದ ಪ್ರತಿ ಕೆ.ಜಿ. ದರ ರೂ. 3/- ರಲ್ಲಿ ಖರೀದಿಸಿ ಫಲಾನುಭವಿಗಳಿಗೆ ಉಚಿತವಾಗಿ ವಿತರಿಸಲಾಗುತ್ತಿದೆ. 2. ರಾಜ್ಯದಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರಾಗಿ ಮತ್ತು ಜೋಳವನ್ನು ಖರೀದಿಸಲಾಗುತ್ತದೆ. ಇದಕ್ಕಾಗಿ ಕೇಂದ್ರ ಸರ್ಕಾರ ನಿಗದಿಪಡಿಸಿರುವ ದರ ಪ್ರತಿ ಕೆ.ಜಿ. ಗೆ ರೂ. 1/- ಆಗಿದ್ದು, ಸದರಿ ದರದಲ್ಲಿ ರಾಗಿ ಮತ್ತು ಜೋಳವನ್ನು ಖರೀದಿಸಲಾಗುತ್ತಿದೆ. 3. ರಾಜ್ಯದಲ್ಲಿ ಎನ್.ಎಫ್.ಎಸ್.ಎ ಪಡಿತರ ಚೀಟಿಗಳನ್ನು ಹೊರತುಪಡಿಸಿ ಹೆಚ್ಚುವರಿಯಾಗಿ ವಿತರಿಸಿರುವ ಪಡಿತರ ಚೀಟಿಗಳ ಫಲಾನುಭವಿಗಳಿಗೆ ವಿತರಿಸಲು ಅಗತ್ಯವಿರುವ ಅಕ್ಕಿಯನ್ನು ಭಾರತೀಯ ಆಹಾರ ನಿಗಮದ Open Market Sale Scheme (ಒಎಂಎಸ್ಎಸ್) ಯೋಜನೆಯಡಿ ಪ್ರತಿ ಕೆ.ಜಿ. ಗೆ ರೂ.22.50 ಮತ್ತು ಮಾರುಕಟ್ಟೆ ದರ ರೂ1.50 ಸೇರಿದಂತೆ ಒಟ್ಟು ರೂ.22.84 ರ ದರದಲ್ಲಿ ಖರೀದಿಸಲಾಗುತ್ತಿದೆ.

		4. ರಾಜ್ಯ ಸರ್ಕಾರದ ವತಿಯಿಂದ ಪ್ರತಿ ಆದ್ಯತಾ (ಪಿಹೆಚ್ ಹೆಚ್) ಪಡಿತರ ಚೀಟಿಗೆ 2 ಕೆ.ಜಿ. ಗೋಧಿಯನ್ನು ಉಚಿತವಾಗಿ ವಿತರಣೆ ಮಾಡಲಾಗುತ್ತಿದೆ. ಇದಕ್ಕಾಗಿ ಅಗತ್ಯವಿರುವ ಗೋಧಿಯನ್ನು ಭಾರತೀಯ ಆಹಾರ ನಿಗಮದ ಓಎಂಎಸ್‌ಎಸ್ ಯೋಜನೆಯಡಿ ಪ್ರತಿ ಕೆ.ಜಿ.ಗೆ ಸರಾಸರಿ ರೂ.24.50 ರ ದರದಲ್ಲಿ ಖರೀದಿಸಲಾಗುತ್ತಿದೆ. 5. ಕೇಂದ್ರ ಸರ್ಕಾರದ ಪಿಎಂಜಿಕೆವೈ ಯೋಜನೆಯಡಿಯಲ್ಲಿ ಏಪ್ರಿಲ್ 2020ರ ಮಾಹೆಯಿಂದ ಪ್ರತಿ ತಿಂಗಳು ಪ್ರತಿ ಎಎವೈ ಮತ್ತು ಪಿಹೆಚ್ ಹೆಚ್ ಫಲಾನುಭವಿಗೆ 5 ಕೆ.ಜಿ ಅಕ್ಕಿಯನ್ನು ಹಾಗೂ ಪ್ರತಿ ಎಎವೈ ಮತ್ತು ಪಿಹೆಚ್‌ಹೆಚ್ ಪಡಿತರ ಚೀಟಿಗೆ 1 ಕೆ.ಜಿ. ತೊಗರಿಬೇಳೆ/ಕಡಲೆಕಾಳನ್ನು ವಿತರಿಸಲಾಗಿದೆ. ಇದಕ್ಕಾಗಿ ಕೇಂದ್ರ ಸರ್ಕಾರದಿಂದ ಅಕ್ಕಿ ಮತ್ತು ತೊಗರಿಬೇಳೆ/ಕಡಲೆಕಾಳನ್ನು ರಾಜ್ಯಕ್ಕೆ ಉಚಿತವಾಗಿ ಹಂಚಿಕೆ ಮಾಡಲಾಗಿರುತ್ತದೆ.
ಈ	ಪ್ರತಿ ತಿಂಗಳು ವಿತರಿಸುತ್ತಿರುವ ಅಕ್ಕಿಯ ಪ್ರಮಾಣ ಕಡಿತ ಮಾಡುವ ನಿರ್ಧಾರ ಕೈಗೊಳ್ಳಲಾಗಿದೆಯೇ?	ಇಲ್ಲ.

ಆನಾಸ 57 ಆನಾಸ 2020 (ಇ-ಆಫೀಸ್)

(ಕೆ.ಗೋಪಾಲಯ್ಯ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.